ಕಾರಣಳೂ ಆಗುವಳು. ಗಂಡುಜೀವಿಗಳು ಹಿಂಗಾಲಿನ ಪ್ರಾಣಿಯಾಗುವುದನ್ನು ಅನಿವಾರ್ಯ ಅಸಹ್ಯವಾಗಿ ಕಂಡವಳು. ವಿಲಕ್ಷಣ ರೀತಿಯ ಪ್ರತಿರೋಧ ಪ್ರತಿಭಟನೆ ಕಾಣಸಿಗುವುದು ಇವಳಲ್ಲಿ. ವಿಲಕ್ಷಣ ತಿರುವಿನ ಜೊತೆ ಬೆಳೆದಳು, ಬದಲಾದಳು ಮೋಗ್ರಿ.

ಬದುಕಿನ ಮತ್ತೊಂದು ಹಂತದಲ್ಲಿ ಅಪ್ಪ ವಾಪಸ್ಸು ಬಂದ. ಒಂದು, ಎರಡು, ಮೂರು ಅನ್ನುತ್ತ ಹೆಂಡತಿ ಮಕ್ಕಳ ಮನೆಗಳನ್ನು ಮಾವಿನ ಹಣ್ಣುಗಳ ಜೊತೆ ಬದಲಾಯಿಸಿದ. ಮೋಗ್ರಿ ಕಂಬದಂತೆ ನಿಂತಳು, ನೋಡಿದಳು, ನಿಡುಸುಯ್ದಳು. ಮಗಳು ಮೋಗ್ರಿ ಈಗ ಎತ್ತರಕ್ಕೆ ಬೆಳೆದಿದ್ದಾಳೆ, ಕಂಬಕ್ಕಿಂತ ಬಾರಿನ ವಯ್ಯಾರದ ಕಂಬ ಸುತ್ತುವಂತಾಗಿದ್ದಾಳೆಂದು ಅರಿವಾಗಿಯೂ ಏನು ಮಾಡಲಾಗದ ಷಂಡಕೋಪದಲ್ಲಿ ಅವಳ ಅಪ್ಪ ತನ್ನ ಇನ್ನೊಂದು ಕುಟುಂಬದ ಮನೆಗೆ ದಾಟಿಕೊಂಡ. ಮೋಗ್ರಿ ತನ್ನ ಡ್ಯೂಟಿಗೆ ದಾಟಿಕೊಂಡಳು.

'ಎಲ್ಲ ಮನೆಯ ಎಲ್ಲ ಕೋಣೆಗಳ ಕಾರ್ಪೆಟ್ಟುಗಳ ಕೆಳಗೆ ಕಾಂಕ್ರೀಟಿನಲ್ಲಿ ಶಾಶ್ವತವಾಗಿ ಸೇರಿಕೊಂಡ ತಾನು ಮತ್ತು ತನ್ನ ಗೆಳತಿಯರು ಪಡೆದ ಕಳ್ಳ ಖುಷಿಯ ಗುಪ್ತನಿಧಿ'ಯಾದಳು ಆಕೆ. ಮುಗ್ಧತೆ ದೋಚಿದವ ಕೇಡಿಯಾಗದೆ, ಮೋಸಗಾರನಾಗದೆ ಕಳ್ಳಪ್ರೇಮಿಯಾಗಿ ಅವಳ ಪ್ರೌಢದೇಹದ ಬುದ್ಧಿಗೂ ಕಂಡುಬಂದ! ಕಣ್ಣೆದುರಿನ ಇತರೆ ಹೆಂಗಳೆಯರು ಗಂಡಸರ ಕಾರಣವಾಗಿ ತಮ್ಮನ್ನು ತಾವು ನಿಕೃಷ್ಟಗೊಳಿಸಿಕೊಳ್ಳುತ್ತಿರುವುದು ಕಂಡಳು, ಮೌನದಲ್ಲೇ ಖಂಡಿಸಿದಳು. ಮೇಲಂತಸ್ತಿನ ಮಹಡಿಯಿಂದ ಹಾರಿದ ಶಾ ಹೆಂಗಸು, ಅಬಾರ್ಷನ್ ಮಾಡಿಸಿಕೊಂಡ ಸಹೋದ್ಯೋಗಿ, ಮದುವೆಗೆ ಬರಬೇಡವೆಂದ ಗೆಳತಿ ಯಮುನಾ... ಉದಾಹರಣೆಯಾದರು. ಮೋಗ್ರಿ ಮತ್ತೂ ಮುಂದೆ ನಡೆದಳು.

ಸುಂದರ್ ಬಾರ್ ಬಿಟ್ಟು ಖಾಲಿ ಇದ್ದವಳು, ಈಗ ಲೈಟ್ ಆಫ್ ಏಶಿಯಾ ಇರಾಣಿ ರೆಸ್ಟುರಾದಲ್ಲಿ ಕೆಲಸಕ್ಕೆ ನಿಂತಳು. ಎಲ್ಲದರ ಲೆಕ್ಕವಿಕ್ಕುತ ಮುದಿ ಮಾಲೀಕರ ಅಸಿಸ್ಟೆಂಟ್ ಆಗಿ ತನ್ನ ಬದುಕಿಗೆ ತಾನೇ ಸಹಾಯಕಿಯಾದಳು. ಬದುಕು ಭಿನ್ನ ಪಾತಳಿಯಲ್ಲಿ ಹೊರಳಿತು. ಮೋಗ್ರಿ ಬದಲಾವಣೆ ಬಿಂದುಗಳನ್ನು ತಿರುವುಗಳನ್ನು ಲೆಕ್ಕವಿಕ್ಕದೆ ಎದುರುಗೊಂಡಳು. 'ಏ ಹೈ ಬೊಂಬೇ ಮೇರಿ ಜಾನ್' ರಾಗ ಸಾಹಿತ್ಯ ಅವಳ ಬದುಕಿನ ಹೆಜ್ಜೆಗಳ ಸದ್ದಿನ ಲಯವಾಯಿತು.

ಮೋಗ್ರಿಗೆ ನಿಜದ ಗೆಳೆತನ ಎಲ್ಲೂ ಸಿಕ್ಕುವುದಿಲ್ಲ. ಕೊನೆಗೂ ಯಾರೊಡನೆ ಏನೂ ಹಂಚಿಕೊಳ್ಳದೆಯೂ ಅವಳ ದುಗುಡ ಕರಗುವುದು ದುಡಿಮೆಯಲ್ಲಿ ಮೈ ಮರೆತಾಗಲೇ. ಲೈಟ್ ಆಫ್ ಏಷ್ಯಾದ ಬೆಳಕು ಹೊಸಬದುಕಿನ ದಾರಿಯನ್ನು ತೋರಿಸುತಿರಬೇಕು. ಮೋಗ್ರಿಯಂತೆ ಯಾ ಅವಳಿಗಿಂತ ಹಿರಿಯರೆಲ್ಲರಂತೆ ಭಿನ್ನ ಕೆಲಸದ ಭಿನ್ನ ಬದುಕಿನ ಮಜಲು ಕಂಡ ಜನರೇ ಅಮಾನುಷ ಶಹರ ಕಂಕುಳಿನಿಂದ, ಮಂಚದ ಕೆಳಗಿನಿಂದ,



ಏಣಿಯ ಸಂಧಿಯಿಂದ ಹೊರಬರುತ್ತಿದ್ದರು. ಹೊಸ ಕಥೆ ಹಳೆ ಕಥೆ ಹೇಳುತ್ತಿದ್ದರು... ಮೋಗ್ರಿಯ ರೂಪಾಂತರದ ಬದುಕಿನ ಹೊಸ ಕಣ್ಣಿಗೆ.

ಅಪ್ಪನನ್ನು ಪೋಲಿ ಶೆಟ್ಟಿ ಪೋರನಿಗೂ ಕಾಕಾನಿಗೂ ಹೋಲಿಸುತ್ತ ಅವಳ ಕಣ್ಣೆದುರಿನ ಪುರುಷಜನ್ಮವನ್ನು ತನ್ನದೇ ತಿಳಿವಳಿಕೆಯ ಧಾಟಿಯಲ್ಲಿ ಅರ್ಥಮಾಡಿಕೊಳ್ಳಲೆತ್ನಿಸುವಳು. ಲಕ್ವ ಹೊಡೆದ ಅಪ್ಪ, ತನ್ನ ಸವತಿಯರ ನೆನೆವ ಅಮ್ಮ, ವೇಶ್ಯಾವಾಟಿಕೆಯ ಲೋಕದಲ್ಲಿನ ಕರ್ಣನಂಥ ರೆಸ್ಟುರಾದ ಕಾಕಾ... ಮೋಗ್ರಿ ಬದುಕಿನಿಂದ ಇನ್ನಷ್ಟು ಕಲಿಯುತ್ತಿದ್ದಾಳೆ, ಮಾಗುತ್ತಿದ್ದಾಳೆ ಕಥೆಯೊಳಗೆ, ನನ್ನ ಎದೆಯೊಳಗೆ... ●